# ✻ ಶ್ರೀರಾಮಕೃಷ್ಣರಲ್ಲಿ ಪ್ರವಾದಿ ಮಹಮ್ಮದರನ್ನು ಕಂಡವರು ✻

ಡಾ. ಎನ್.ಬಿ. ದೇಸಾಯಿ

**ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಲೇಖಕರು ಶ್ರೀರಾಮಕೃಷ್ಣರ ಧರ್ಮಸಮನ್ವಯ ಭಾವನೆಯ ಒಂದು ಮುಖವನ್ನು ಈ ಲೇಖನದ ಮೂಲಕ ಓದುಗರಿಗೆ ಪರಿಚಯಿಸಿದ್ದಾರೆ. ಶ್ರೀರಾಮಕೃಷ್ಣರು ಎಲ್ಲ ಧರ್ಮಗಳನ್ನೂ ಕುತೂಹಲಕ್ಕಾಗಿ ಆಚರಿಸಲಿಲ್ಲ. ಅವರ ಅನ್ವೇಷಣೆಯಲ್ಲಿ ಜಗತ್ತನ್ನು ಕಾಡುತ್ತಿರುವ ಮತಭೇದಗಳನ್ನು ಹೋಗಲಾಡಿಸಿ ಶಾಂತಿಯನ್ನು ಕಂಡುಕೊಳ್ಳುವ ಪ್ರಯತ್ನವಿದೆ.**

ಜಗತ್ತಿನೆಲ್ಲೆಡೆ ಅಶಾಂತಿ, ದೊಂಬಿ, ಕೋಮು ಗಲಭೆಗಳ ತಾಂಡವನೃತ್ಯ ಪಿಶಾಚ ರೂಪದಲ್ಲಿ ಮೆರೆಯುತ್ತಿದೆ. ಇವುಗಳಿಗೆ ಅನೇಕ ಕಾರಣಗಳಿವೆ, ಅಷ್ಟೇ ಅಲ್ಲ, ಇವು ಮನುಷ್ಯನಲ್ಲಿರುವ ಸ್ವಾರ್ಥ, ಅಸೂಯೆ ಮತ್ತು ಅಜ್ಞಾನಗಳು, ಕೊರತೆಗಳು ದಿನೇ ದಿನೇ ಹೆಚ್ಚುತ್ತಿರುವುದರ ಸಂಕೇತವಾಗಿವೆ. ಇಂತಹ ಸಂಕುಚಿತ ಮನೋಭಾವನೆಯ ಕಾರ್ಯಚಟುವಟಿಕೆಗಳನ್ನು ತಡೆಯುವ ಮಾರ್ಗವನ್ನು ಜಗತ್ತಿನ ಎಲ್ಲ ಧರ್ಮಗಳಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಆದರೂ ಅದು ಪ್ರಯೋಜನಕಾರಿಯಾದ ರೀತಿಯಲ್ಲಿ ಆಚರಿಸಲ್ಪಡುತ್ತಿಲ್ಲ. ಆಚಾರ್ಯವರ್ಗಗಳಲ್ಲಿ ಬೋಧನೆ ಮತ್ತು ಕ್ರಿಯೆಗಳ ನಡುವೆ ಆಳವಾದ ಮತ್ತು ಕೂಡಿಸಲಾಗದ ಕಂದರ ಕಂಡುಬರುವುದು. ಯಾವ ಆಚಾರ್ಯನಲ್ಲಿ ನಡೆ ಹಾಗೂ ನುಡಿಯ ಮಧ್ಯೆ ನಿಕಟ ಸಂಬಂಧವನ್ನು ಕಾಣುವೆವೋ, ಆಧ್ಯಾತ್ಮಿಕತೆಯ ಹಾಗೂ ಸಾಧನೆಯ ತೀವ್ರತೆಯನ್ನು ನೋಡುವೆವೋ, ಆತನ ಬೋಧನೆಗಳು ಮಾತ್ರ ನಮ್ಮ ಮೇಲೆ ಸತ್ಪರಿಣಾಮವನ್ನು ಮಾಡಬಲ್ಲವು.

ವಿಶ್ವಾದ್ಯಂತ ಧರ್ಮಗಳ ನಡುವಿನ ತಿಕ್ಕಾಟವು ರಾಜಕಾರಣಿಗಳ ಕೈಯಲ್ಲಿ ಒಂದು ಪ್ರಬಲ ಅಸ್ತ್ರವಾಗಿ ಪರಿಣಮಿಸಿದೆ. ತಮ್ಮ ಧರ್ಮದ ಮತ್ತು ಅನ್ಯ ಧರ್ಮಗಳ ಬಗ್ಗೆ ಸರಿಯಾದ ಕಲ್ಪನೆಯ ಅಭಾವವೇ ಇದಕ್ಕೆಲ್ಲ ಕಾರಣ ಎಂದು ಅನಿಸುವುದು. ಇಂತಹ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಮಾಡಿದ ಅನ್ಯ ಧರ್ಮಗಳ ಸಾಧನೆ ಹಾಗೂ ಅವುಗಳೆಲ್ಲ ವಸ್ತುತಃ ಒಂದೇ ಎಂದು ಅನುಭವದ ಮೂಲಕ ಕಂಡುಕೊಂಡದ್ದು ವಿಶೇಷವೇ ಸರಿ. ಮುಂಬರುವ ದಿನಗಳಲ್ಲಿ ಜನಾಂಗದ ಧಾರ್ಮಿಕ ಜೀವನದಲ್ಲಿ ನಡೆಯುವ ಆಗುಹೋಗುಗಳನ್ನು ಅನುಭಾವಿಗಳು ಅರಿಯಬಲ್ಲರು. ಶ್ರೀರಾಮಕೃಷ್ಣರ ಶಿಷ್ಯರೂ, ಸ್ವಾಮಿ ವಿವೇಕಾನಂದರ ಸೋದರ ಸಂನ್ಯಾಸಿಗಳೂ ಆದ ಸ್ವಾಮಿ ಶಾರದಾನಂದರು ತಾವು ಬರೆದ ಬೃಹತ್ ಗ್ರಂಥ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ತಮ್ಮ ಆಶಾಪೂರ್ಣ ಅನಿಸಿಕೆಯನ್ನು ಈ ರೀತಿ ವ್ಯಕ್ತಪಡಿಸುತ್ತಾರೆ: "ಉಭಯರ (ಹಿಂದೂ ಮತ್ತು ಮುಸಲ್ಮಾನರ) ನಡುವೆಯಿರುವ ಅಗಾಧ ಅಂತರ ಮುಂದೊಂದು ದಿನ ಅಳಿಯುತ್ತದೆ. ಮತ್ತು ಪರಸ್ಪರ ಪ್ರೀತಿಯಿಂದ ಆಲಂಗಿಸುತ್ತಾರೆ. ಅಲ್ಲದೇ ಸಹಾನುಭೂತಿ ತಾಳಿ ಭ್ರಾತೃ-ಭಾವದಿಂದ ಬದುಕುವರು. ವೇದಾಂತದಲ್ಲಿ ಅಡಗಿರುವ ತತ್ತ್ವಗಳು ಈ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಶ್ರೀರಾಮಕೃಷ್ಣರು ಇಸ್ಲಾಂ ಧರ್ಮ ಸಾಧನೆ ಮಾಡಿದ್ದೇ ಇದಕ್ಕೆ ಮುನ್ಸೂಚಿಯಾಗಿದೆ." ಭವಿತವ್ಯದಲ್ಲಿ ಸಾಕಾರಗೊಳ್ಳಲಿರುವ ಈ ಒಂದು ಮಹಾನ್ ದರ್ಶನಕ್ಕೆ ಪೋಷಕವಾದ ಕೆಲವು ಘಟನೆಗಳನ್ನು ನಾವು ನೋಡಬಹುದು.

ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜರು (ಮಹಾಪುರುಷ ಮಹಾರಾಜರು) ಒಂದೆಡೆ ಹೇಳುತ್ತಾರೆ: "ನಿಮಗೆ ಆಶ್ಚರ್ಯವಾಗಬಹುದು, ಕೆಲವು ಮುಸಲ್ಮಾನರು ಗುರುಮಹಾರಾಜರನ್ನು ಪ್ರವಾದಿ ಮಹಮ್ಮದರೆಂದು ತಿಳಿದು ಪೂಜಿಸುತ್ತಾರೆ. ಒಂದು ಸಾರಿ ನಾನು ನೀಲಗಿರಿ ಬೆಟ್ಟಗಳಿಗೆ ಭೇಟಿ ನೀಡಿದ್ದಾಗ ಓರ್ವ ಮಹಮ್ಮದೀಯ ವೈದ್ಯರು ಮತ್ತು ಅವರ ಕುಟುಂಬ ದವರು ನನ್ನನ್ನು ಕಾಣಲು ಬಂದಿದ್ದರು. ಅವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಪಡೆದು ಮುಂಬಯಿಯಲ್ಲಿ ಸುಪ್ರಸಿದ್ಧ ವೈದ್ಯರಾಗಿದ್ದರು." ಮತ್ತೊಂದು ಸಂದರ್ಭದಲ್ಲಿ ಹೇಳುತ್ತಾರೆ : "ಕಡಪಾದಲ್ಲಿ ಪ್ರಸಿದ್ಧರಾಗಿರುವ ಸೂಫಿ ಪಂಗಡದ ಓರ್ವ ಮುಸಲ್ಮಾನ ಭಕ್ತ ಶ್ರೀ ಖಾನ ಬಹದ್ದೂರರು ಶ್ರೀರಾಮಕೃಷ್ಣರ ಅನುಯಾಯಿಗಳು. ಕಡಪಾದಲ್ಲಿನ ಆಶ್ರಮದ ಪ್ರಾರಂಭದಿಂದಲೂ, ಅವರು ಅಲ್ಲಿನ ಎಲ್ಲ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದಾರೆ. ನಾನು ಅಲ್ಲಿ ಕೆಲ ದಿನಗಳನ್ನು ಕಳೆದೆ. ಆಗ ನನಗೆ ಕಂಡುಬಂದದ್ದೇನೆಂದರೆ, ಶ್ರೀ ಖಾನರು ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಆಶ್ರಮದ ಒಂದು ಮೂಲೆಯಲ್ಲಿ ಕುಳಿತುಕೊಂಡು ಗುರುಮಹಾರಾಜರ ಚಿತ್ರಪಟವನ್ನು ತದೇಕ ಚಿತ್ತದಿಂದ ನೋಡುತ್ತಿದ್ದುದು. ಪೂಜ್ಯ ಪ್ರವಾದಿ ಮಹಮ್ಮದರು ರಾಮಕೃಷ್ಣರಾಗಿ ಜಗತ್ತಿನ ಒಳಿತಿಗಾಗಿ ಹುಟ್ಟಿ ಬಂದಿರುವರು ಎನ್ನುವುದು ಅವರ ನಂಬಿಕೆ" [For Seekers of God, ಅದ್ವೈತ ಆಶ್ರಮ, ಕೊಲ್ಕತಾ, ಪು.45-46]. **(ಕಡಪಾದ ಈ ಆಶ್ರಮವು ಇತ್ತೀಚಿಗೆ ರಾಮಕೃಷ್ಣ ಮಹಾಸಂಘದ ಅಧಿಕೃತ ಶಾಖೆಯಾಗಿದೆ. –ಸಂ.)**

ಶ್ರೀರಾಮಕೃಷ್ಣರ ಗಂಟಲು ಬೇನೆಗಾಗಿ ಚಿಕಿತ್ಸೆ ನೀಡುತ್ತಿದ್ದ ಡಾ. ಮಹೇಂದ್ರನಾಥ ಸರಕಾರರಲ್ಲಿ ಹೋಮಿಯೋಪತಿ

ಕಲಿಯುತ್ತಿದ್ದ ಹಾಗೂ ಅವರ ಸಹೋದ್ಯೋಗಿಗಳಾಗಿದ್ದ ಡಾ. ಅಬ್ದುಲ್ ವಜೀಜರು ಮತ್ತೋರ್ವ ಮುಸಲ್ಮಾನ ಭಕ್ತ. ಇವರಿಗೆ ಗೃಹೀಭಕ್ತರಾದ ಶ್ರೀರಾಮಚಂದ್ರ ದತ್ತನ ಜೊತೆ ಬಂದಾಗ ೧೮೮೫ರಲ್ಲಿ ಶ್ರೀರಾಮಕೃಷ್ಣರ ಭೇಟಿಯಾಯಿತು. ಅವರು ನೌಖಾಲಿ ನಗರಪಾಲಿಕೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದರು. 'ಪರಮ ಸತ್ಯವು ಎಲ್ಲ ಧರ್ಮಗಳಲ್ಲಿ ಪ್ರಕಟಗೊಂಡಿದೆ ಮತ್ತು ಆಯಾ ಧರ್ಮಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಓದಬೇಕು. ಈ ಕಾರಣಕ್ಕಾಗಿ ರಾಮಕೃಷ್ಣರನ್ನು ಕಾಣಬೇಕೆಂಬ ಹಂಬಲ ನನಗೆ ಉಂಟಾಯಿತು" ಎಂದು ತಮ್ಮ ಜೀವನಸ್ಮೃತಿಯಲ್ಲಿ ಬರೆಯುತ್ತಾರೆ. ತಮಗೆ ಆದ ಅನುಭವಗಳನ್ನು ಕೆಳಕಂಡ ರೀತಿಯಲ್ಲಿ ವಿವರಿಸುತ್ತಾರೆ:

"ನಮ್ಮ ಧರ್ಮದ ಸಂಪ್ರದಾಯದಂತೆ ನಾವು (ಡಾ. ಅಬ್ದುಲ್ ವಜೀಜ ಮತ್ತು ಫೇಣಿ ಬಾಜಾರ್, ಶಿಲೆಟ್‌ನ ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಆಗಿದ್ದ ಅವರ ಮಿತ್ರ ಅಬ್ಬಾಸ್ ಆಲಿ) ಬೇರೆಯವರಿಗೆ ತಲೆಬಾಗಿಸಿ ನಮಸ್ಕರಿಸುವುದಿಲ್ಲವೆಂದು ನಿಶ್ಚಯ ಮಾಡಿದ್ದೆವು. ಆದರೆ ನಾವು ರಾಮಕೃಷ್ಣರಿಗೆ ಶ್ರದ್ಧಾಪೂರ್ವಕ ಗೌರವವನ್ನು ಸಲ್ಲಿಸಲು ಸಿದ್ಧರಿದ್ದೆವು. ಗುರುಮಹಾರಾಜರೇ ನಮ್ಮ ಹತ್ತಿರ ಬಂದು ತಲೆಬಾಗಿ ನಮಗೆ ಪ್ರಣಾಮ ಸಲ್ಲಿಸಿದರು! ನಮಗೆ ಆಶ್ಚರ್ಯ! ನಾವೂ ತಲೆಬಾಗಿ ಪ್ರಣಾಮಗಳನ್ನು ಸಲ್ಲಿಸಬೇಕಾಯಿತು.

"ಅವರ ಕೊಠಡಿಯಲ್ಲಿ ನಮ್ಮಿಬ್ಬರನ್ನೂ ಆಸನದಲ್ಲಿ ಕುಳಿತುಕೊಳ್ಳಲು ತಿಳಿಸಿ ತಾವು ಮತ್ತೊಂದು ಆಸನದಲ್ಲಿ ಕುಳಿತು ಮಾತನಾಡತೊಡಗಿದರು. ಆಗ ನನ್ನ ಮನಸ್ಸಿನಲ್ಲಿಯ ವಿಚಾರಗಳು ಈ ರೀತಿ ಇದ್ದವು: 'ಅವರೊಬ್ಬ ಪವಿತ್ರ ಮನುಷ್ಯನೆಂದು ಕೇಳಿರುವೆ. ಆದರೆ ಏಕೆ ನಮ್ಮಿಂದ ಸ್ವಲ್ಪ ದೂರದಲ್ಲಿ ಕುಳಿತಿರುವರು? ಕಾರಣವೇನಿರಬಹುದು? ನಾವು ಮುಸಲ್ಮಾನರು, ಅವರು ಹಿಂದೂ ಬ್ರಾಹ್ಮಣರೆಂದೇ?' ಈ ವಿಚಾರ ಮನಸ್ಸಿನಲ್ಲಿ ಬಹಳ ಹೊತ್ತಿನವರೆಗೆ ಇರಲಿಲ್ಲ. ಅವರು ದೇವರ ಬಗ್ಗೆ ಮಾತನಾಡುತ್ತಿದ್ದಾಗ ಅದರಲ್ಲಿ ಮುಳುಗಿ ಹೋದರು. ನಮ್ಮ ಸಮೀಪಕ್ಕೆ ಬಂದು ನಮ್ಮ ಆಸನದ (ಚಾಪೆ) ಮೇಲೆ ಕುಳಿತುಕೊಂಡುಬಿಟ್ಟರು. ಗುರುಮಹಾರಾಜರ ಪ್ರೀತಿಗೆ ಮಣಿದು ಅದರ ಪ್ರವಾಹದಲ್ಲಿ ಈಜತೊಡಗಿದೆವು.

"ದಕ್ಷಿಣೇಶ್ವರಕ್ಕೆ ಬರುತ್ತಿರುವಾಗ ಗುರುಮಹಾರಾಜರಿಗೆ ನಾನು ಮೂರು ಪ್ರಶ್ನೆಗಳನ್ನು ಕೇಳುವುದಾಗಿ ನಿಶ್ಚಯ ಮಾಡಿದ್ದೆ. ಮಾತನಾಡುವ ಸಂದರ್ಭದಲ್ಲಿ ನಾನು ಅವುಗಳನ್ನು ಕೇಳದೆಯೇ ಎಲ್ಲ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರಗಳು ತಾವಾಗಿಯೇ ದೊರೆತವು! ಅವುಗಳಲ್ಲಿನ ಒಂದು ಪ್ರಶ್ನೆ ಹೀಗಿತ್ತು: 'ಗೃಹಸ್ಥನಾಗಿದ್ದುಕೊಂಡು ಯೋಗಾಭ್ಯಾಸವನ್ನು ಮಾಡಿಕೊಂಡಿರಲು ಸಾಧ್ಯವೇ?' ಇದಕ್ಕೆ ಗುರುಮಹಾರಾಜರು ಕೊಟ್ಟ ಉತ್ತರ: 'ಗೃಹಸ್ಥನಾಗಿದ್ದುಕೊಂಡು ಅಧ್ಯಾತ್ಮ ಜೀವನದ ನಿಯಮಗಳನ್ನು ಪಾಲಿಸುತ್ತಿದ್ದರೆ ಆ ಪಥದಿಂದ ಜಾರಿ ಬೀಳುವ ಸಂದರ್ಭಗಳು ಬಹಳ ವಿರಳ. ಆದರೆ ಉನ್ನತಿ ಕಷ್ಟಸಾಧ್ಯ.'

"ನಮ್ಮ ಪವಿತ್ರ ಕುರಾನ್ ನಿಜವಾದ ಸಂತನ ಲಕ್ಷಣಗಳನ್ನು ಸಾರಿಹೇಳುತ್ತವೆ. ಅವೆಲ್ಲವುಗಳನ್ನು ಶ್ರೀರಾಮಕೃಷ್ಣರಲ್ಲಿ ನಾವು ಕಂಡುಕೊಂಡೆವು. ಆದರೆ ನನಗೆ ಈ ಸಂಸಾರದಲ್ಲಿ ವ್ಯಾಮೋಹ ಇದ್ದುದರಿಂದ ಅವರನ್ನು ಪದೇ ಪದೇ ಭೇಟಿ ಮಾಡಲು ಧೈರ್ಯವಿರಲಿಲ್ಲ.

"ಮತ್ತೊಂದು ಬಾರಿ ರಾಮಬಾಬು ಎಂಬ ಭಕ್ತನೋರ್ವನ ಮನೆಯಲ್ಲಿ ಪರಮಹಂಸರನ್ನು ಕಾಣುವ ಸುಸಂದರ್ಭ ಒದಗಿತು. ಆಗ ಅವರು ತಮ್ಮ ಭಕ್ತರ ಗುಂಪಿನಲ್ಲಿ ಕೀರ್ತನದಲ್ಲಿ ತೊಡಗಿದ್ದರು. ಅನಂತರ ಅವರು ನರ್ತಿಸುತ್ತಿದ್ದಾಗ ಸಮಾಧಿಸ್ಥಿತಿಗೆ ಹೋದದ್ದನ್ನು ನೋಡಿದೆವು. ಅಂಥದ್ದನ್ನು ನಾವೆಲ್ಲೂ ಮೊದಲು ಕಂಡಿರಲಿಲ್ಲ. ಕೀರ್ತನೆ ಮುಗಿದ ನಂತರ ನಾನು ರಾಮಕೃಷ್ಣರಿಗೆ ನಮಸ್ಕರಿಸಿದಾಗ ನಮ್ಮೆಲ್ಲರ ಯೋಗಕ್ಷೇಮವನ್ನು ವಿಚಾರಿಸಿಕೊಂಡು 'ನೀನೇಕೆ ಈಗ ಬರುತ್ತಿಲ್ಲ? ಮೇಲಿಂದ ಮೇಲೆ ದಕ್ಷಿಣೇಶ್ವರಕ್ಕೆ ಬರಲು ಪ್ರಯತ್ನಿಸು' ಎಂದು ತಿಳಿಸಿದರು. ಗುರುಮಹಾರಾಜರ ಅಪಾರ ಪ್ರೀತಿ, ಪ್ರೇಮಗಳನ್ನು ನಾನೆಂದಿಗೂ ಮರೆಯಲಾರೆ. [Ramakrishna As We Saw Him, ಅದ್ವೈತ ಆಶ್ರಮ, ಕೊಲ್ಕತಾ, ಪು. 431-33].

ಮಹಮ್ಮದ್ ದಾವುದ್ ರಹಬರ ಎಂಬ ಶ್ರೇಷ್ಠ ಚಿಂತಕರು ಶ್ರೀರಾಮಕೃಷ್ಣರನ್ನು ಕುರಿತು ಈ ರೀತಿ ಬರೆಯುತ್ತಾರೆ:

"ಧರ್ಮಗಳ ಇತಿಹಾಸದ ಪುಟಗಳಲ್ಲಿ ರಾಮಕೃಷ್ಣರು ಜಗನ್ಮಾತೆಯ ಶಿಶುವಾಗಿ, ಭಕ್ತರಾಗಿ ಕಂಗೊಳಿಸುತ್ತಾರೆ. ಕೊಲ್ಕತಾದ ದಕ್ಷಿಣೇಶ್ವರದ ಕಾಳಿಮಂದಿರದಲ್ಲಿ ಆಧ್ಯಾತ್ಮಿಕ ಜೀವನವನ್ನು ಅರಂಭಿಸಿದ ಅವರ ಜೀವನ ತೆರೆದಿಟ್ಟ ಪುಸ್ತಕದಂತೆ. ಅದರಲ್ಲಿ ಪೂಜೆ–ಪುನಸ್ಕಾರಗಳು, ಸೇವಾಕಾರ್ಯಗಳು ಪುನರುಜ್ಜೀವನಗೊಂಡಿವೆ. ಮೂವತ್ತಕ್ಕಿಂತಲೂ ಹೆಚ್ಚಿನ ಶಿಷ್ಯರು ಅವರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ನೂರಾರು ಭಕ್ತರು ಶಾಂತಿ, ಸಮಾಧಾನ ಮತ್ತು ಆಶೀರ್ವಾದಗಳನ್ನು ಪಡೆದುಕೊಂಡರು.

"ಒಂದು ಸಾವಿರ ಪುಟಗಳಿರುವ ಅವರ ನುಡಿಗಳನ್ನು ಒಳಗೊಂಡಿರುವ ದಾಖಲೆ, *Gospel of Sri Ramakrishna* ಎಂಬ ಬೃಹತ್ ಗ್ರಂಥವನ್ನು ನಾನು ಓದಿರುವೆ. ಅದರಲ್ಲಿ ಶ್ರೀರಾಮಕೃಷ್ಣರ ತೆರೆದ ಮನಸ್ಸು, ಭಕ್ತಿ, ತ್ಯಾಗ, ಸೇವೆ

ಇತ್ಯಾದಿಗಳು ಕಂಡುಬರುವವು. ಅವರೊಬ್ಬ ಸಾಮಾನ್ಯ ಮನುಷ್ಯರಲ್ಲ. ಅವರ ಸನ್ನಿಧಿಯೆಂದರೆ ಸ್ವರ್ಗ. ಈ ಪುಸ್ತಕದಲ್ಲಿ ಅವರ ಮಾತು ಕತೆಗಳನ್ನು ಅವರ ನೇರ ಶಿಷ್ಯರಾದ ಮಹೇಂದ್ರನಾಥರು ಬರೆದು ಇಟ್ಟಿರುತ್ತಾರೆ. ಅವು ಭಕ್ತರನ್ನು ಅಧ್ಯಾತ್ಮ ಮಾರ್ಗಕ್ಕೆ ಹುರಿದುಂಬಿಸುತ್ತವೆ.

"ಶ್ರೀರಾಮಕೃಷ್ಣರ ಮತ್ತೊಂದು ವಿಶೇಷತೆಯೆಂದರೆ ತ್ಯಾಗ. ಆಧುನಿಕ ರಾಜಕೀಯ ನಾಗರಿಕತೆಯು ತ್ಯಾಗವನ್ನು ಕೀಳು ರೀತಿಯಲ್ಲಿ ನೋಡುವುದು. ಅದಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಜನ ಹೇಳುವರು. ಕೆಲವೊಂದು ದೇಶ ಗಳಲ್ಲಿ ತ್ಯಾಗಜೀವಿಗಳನ್ನು ಪರಾವಲಂಬಿಗಳೆಂದು ಟೀಕಿಸುತ್ತಾರೆ; ತ್ಯಾಗಜೀವನದ ಆಚರಣೆ ಕಾನೂನುಬಾಹಿರ ಎಂದೂ ಹೇಳುತ್ತಾರೆ. ಇದಕ್ಕೆಲ್ಲ ಕಾರಣ ರಾಜಕೀಯ ರಂಗದಲ್ಲಿ ತಮ್ಮನ್ನು ಬುದ್ಧಿವಂತರೆಂದು ತಿಳಿದುಕೊಂಡಿರುವ ಜಾಣಾಕ್ಷರು ಹಾಗೂ ಸ್ವಾರ್ಥಿಗಳು. ಅವರು ರಾಮಕೃಷ್ಣರನ್ನು 'ತಪ್ಪಿಸಿ ಕೊಳ್ಳುವ ಮತ್ತು ತಟಸ್ಥ' ಪ್ರವೃತ್ತಿಯ (escapist – quietism) ಜನರು ಎಂದರೆ ಅದೇನೂ ಆಶ್ಚರ್ಯವಲ್ಲ.

"ಅವರಲ್ಲಿ ನಾವು ಕಾಣುವುದೇನು? ಅದು ತ್ಯಾಗ, ಆಸಕ್ತಿ ಕೆರಳಿಸುವಂತಹ, ಸತ್ಯದ ಅನ್ವೇಷಣೆಯಿಂದ ಎಲ್ಲರನ್ನೂ ಆಕರ್ಷಿಸುವ ದೈವೀ ಶಕ್ತಿ. 'ತಪ್ಪಿಸಿಕೊಳ್ಳುವಿಕೆ ಮತ್ತು ತಟಸ್ಥ ಪ್ರವೃತ್ತಿ' ಅವರದಲ್ಲ. ಧರ್ಮ ಮತ್ತು ಮಾನಸಿಕ ಕ್ಷೇತ್ರಗಳಲ್ಲಿ ಅವರು ಮಾಡಿದ ಪ್ರಯೋಗಗಳು ಬಹಳ ಮೌಲ್ಯವನ್ನೊಳ ಗೊಂಡಿವೆ. ಜವಾಬ್ದಾರಿಯಿಂದ ಅವರು ಓಡಿಹೋಗಲಿಲ್ಲ. ಬದಲಾಗಿ ಅವುಗಳನ್ನು ಎದುರಿಸಿದರು.

"ತಾವು ಮಾಡಿದ ಯಾವುದೇ ಕಾರ್ಯಗಳಿಗಾಗಿ, ಬೋಧನೆ ಗಳಿಗಾಗಿ ಅವರು ಹಣವನ್ನು ಕೇಳಲಿಲ್ಲ ಮತ್ತು ಕೂಡಿಡಲಿಲ್ಲ. ಇದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ. ಮುಸ್ಲಿಮ್, ಬೌದ್ಧ, ಕ್ರಿಶ್ಚಿಯನ್ ಧರ್ಮಗಳ ಅನುಯಾಯಿಗಳೊಂದಿಗೆ ನಿಕಟ, ಸ್ನೇಹಪರ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಆಯಾ ಧರ್ಮಗಳ ಸಾಧನೆಯನ್ನು ಮಾಡಿದ್ದರು. ಆದಕಾರಣ ನಾನು ಅವರಿಗೆ ನಮಸ್ಕರಿಸುವೆ.

"ಈಗಿನ ವಿದ್ಯಾವಂತರಲ್ಲಿ ಜಾಣ್ಮೆ, ಬುದ್ಧಿಮತ್ತೆ ಮತ್ತು ದೂರದೃಷ್ಟಿಗಳ ಕೊರತೆ ಕಂಡುಬರುವುದು. ಅವುಗಳನ್ನು ಮರಳಿ ಪಡೆದುಕೊಳ್ಳಲು ಶ್ರೀರಾಮಕೃಷ್ಣರ ಹತ್ತಿರ ಬಂದರೆ ಸಾಧ್ಯ. ಅವರ ಜೀವನವೆಂದರೆ ಧರ್ಮ ಮತ್ತು ವಿಜ್ಞಾನಗಳ ಸುಮಧುರ ಮಿಲನವೆಂದರೆ ಅದೇನು ಅತಿಶಯೋಕ್ತಿಯಲ್ಲ."

[World Thinkers on Ramakrishna and Vivekananda, ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್, ಕೊಲ್ಕತಾ, 1985, ಪು.13-4].

## ಮಾತು ಎಬ್ಬಿಸಿದ ಕ್ರಾಂತಿ

ಸೆಲ್ಮಾವಿತ್. ಉಚ್ಚರಿಸಲು ಕಷ್ಟವಾದ ಈ ಹೆಸರು ಒಬ್ಬಳು ಸುಪ್ರಸಿದ್ಧ ಬಾಲಕಿಯದು. ಇಥಿಯೋಪಿಯಾ ದೇಶದ ದೊಡ್ಡ ನಗರ ಅಡ್ಡಿಸ್ ಅಬಾಬಾದ ಬೀದಿಯೊಂದರಲ್ಲಿ ನಿಂತಿದ್ದ ಈ ನಾಲ್ಕು ವರ್ಷದ ಮಗುವನ್ನು ಯಾರೋ ಕೇಳಿದರು: "ನೀನು ದೊಡ್ಡವಳಾದಾಗ ಏನಾಗಬೇಕೆಂದು ಬಯಸುತ್ತೀ?" "ನಾನು ಬದುಕಿರಬೇಕು ಎಂದು ಇಷ್ಟ" ಎಂದು ಆ ಮಗು ಉತ್ತರಿಸಿತು.

ಅವರು ಅವಳ ಚಿತ್ರ ತೆಗೆದು ಒಂದು ಪೋಸ್ಟರ್ ಸಿದ್ಧಪಡಿಸಿದರು. ತಾವು ಕೇಳಿದ ಪ್ರಶ್ನೆ, ಅದಕ್ಕೆ ಅವಳ ಅತಿ ಅದ್ಭುತ ಉತ್ತರವನ್ನು ಆ ಪೋಸ್ಟರಿನಲ್ಲಿ ಹಾಕಿದರು. ಇದು ಇಡೀ ಪ್ರಪಂಚದಲ್ಲಿ ಹೆಸರು ಮಾಡಿತು. ಪ್ರತಿ ಮಗುವಿಗೂ ಪ್ರಾಯ ಬರುವವರೆಗೆ ಬದುಕಿ ಉಳಿಯುವ ಹಕ್ಕು (Right to Live) ಇರಬೇಕೆಂದು ಪ್ರಪಂಚಕ್ಕೆ ತಿಳಿಯಹೇಳಲು ಸೆಲ್ಮಾವಿತ್‌ಳ ಉತ್ತರವನ್ನು ಮನಸ್ಸಿನಲ್ಲಿಟ್ಟುಕೊಂಡು ಎಷ್ಟೋ ಜನ ಸಂಘಟಿತರಾದರು.

ಎಂಬತ್ತರ ದಶಕದಲ್ಲಿ ಮಕ್ಕಳ ಬದುಕುವ ಹಕ್ಕಿನ ಬಗೆಗಿನ ಚಳುವಳಿ ಹೀಗೆ ಮೊದಲಾಯಿತು. ಯುದ್ಧ ನಡೆಯುತ್ತಿದ್ದ ಲೆಬನಾನ್, ಎಲ್ ಸಾಲ್ವಡಾರ್‌ಗಳಲ್ಲಿ ಬಾಯಿಬೇಧಿಯಿಂದ ಸಾಯುತ್ತಿದ್ದ ಮಕ್ಕಳಿಗೆ ಲಸಿಕೆ ಹಾಕಿ ಉಳಿಸುವ ಸಲುವಾಗಿ ಕೆಲದಿನ ಕದನ ವಿರಾಮ ಜಾರಿಗೆ ಬಂತು. ಪೋಲಿಯೋ, ದಡಾರದಂತಹ ಮಕ್ಕಳ ಪಾಲಿನ ಮಾರಕ ರೋಗಗಳ ನಿರ್ಮೂಲನೆಗಾಗಿ ರಾಷ್ಟ್ರಾಧ್ಯಕ್ಷರುಗಳು ಟೊಂಕಕಟ್ಟಿ ನಿಲ್ಲು ವಂತಾಯಿತು.

ಸೆಲ್ಮಾವಿತ್ ಬದುಕಿದ್ದಾಳೆ. ಏಳನೆ ವಯಸ್ಸಿಗೆ ಶಾಲೆಗೆ ಸೇರಿ ಪ್ರತಿಭಾವಂತ ವಿದ್ಯಾರ್ಥಿನಿ ಎನಿಸಿದ್ದಾಳೆ.

ಮಗುವಿನ ಒಂದು ಮುದ್ದು ಮಾತು ಒಂದು ಕ್ರಾಂತಿ ಯನ್ನೇ ಪ್ರಾರಂಭಿಸಿತು. ಪ್ರಪಂಚದಾದ್ಯಂತ ಆರೋಗ್ಯವಂತ ಮಕ್ಕಳಿಗಾಗಿ ಮೂಡಿದ ಕ್ರಾಂತಿ ಅದು. ಮಾತಿನ ಶಕ್ತಿ ಅಪಾರ. ಅಲ್ಲವೆ!

(ಆಧಾರಿತ) ಸಂಗ್ರಹ :

ಡಾ. ಎಚ್. ಪಾಂಡುರಂಗವಿಠಲ